'ಈ ಫ್ಯಾನ್ಸಿ ಕಾರನ್ನು ನೀನು ಬಹಳ ಕಾಲ ಓಡಿಸಲಾಗುವುದಿಲ್ಲ ಎಂದು ಮೊದಲು ತಿಳಿದುಕೋ. ಇದನ್ನೇ ಏಕೆ? ಯಾವುದೇ ಕಾರನ್ನು ನೀನು ಓಡಿಸಲಾಗುವುದಿಲ್ಲ! ಈ ಬಗ್ಗೆ ನನಗೆ ಯಾವುದೇ ಬೇಜಾರಿಲ್ಲ! ಒಳ್ಳೆಯದೇ ಆಯ್ತು. ನಿನಗೆ ಕೆಲವು ದಿನ ಕಂಬಿಗಳನ್ನು ಎಣಿಸಲು ಸಿಕ್ಕಿದರೂ ಸಿಕ್ಕೀತೆ!'

'ಏನಂದಿರಿ ಆಫೀಸರ್? ಜೈಲು?' ನಾನು ಹೌಹಾರಿದೆ.

'ಖಂಡಿತವಾಗಿಯೂ' ಎಂದ ಅವನ ಕಣ್ಣುಗಳು ಹೊಳೆಯುತ್ತಿದ್ದವು. 'ಅಷ್ಟೇ ಅಲ್ಲ, ದೊಡ್ಡ ಮೊತ್ತದ ದಂಡ ಕೂಡ! ಆಯ್ತು ಬ್ರದರ್. ನಿಮಗೆ ಕೋರ್ಟಿಗೆ ಹಾಜರಾಗಲು ಆದೇಶ ಬರುತ್ತದೆ, ಆವಾಗ ಭೇಟಿಯಾಗೋಣ' ಎನ್ನುತ್ತಾ ಅವನು ಮೋಟರ್‌ಬೈಕಿನ ಬಳಿಗೆ ಹೋದ. ಹತ್ತಿ ಕುಳಿತ. ಅದು ಒಂದೇ ಕಿಕ್ಕಿಗೆ ಜೀವ ತಳೆಯಿತು. ನಾವು ಕಣ್ಣು ಮುಚ್ಚಿ ತೆರೆಯುವಷ್ಟರಲ್ಲಿ ಅವನು ಅಲ್ಲಿಂದ ಮಾಯವಾಗಿದ್ದ.

